ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

Karnataka State Road Transport Corporation
"Transport House" Central Offices,
K.H.Road, Shanthinagar, Bangalore-560 027. India
Tel : 080-22 221321 / 25
Website : www.ksrtc.in

ಸಂ.ಕರಾಸ:ಕೇಕ:ಆಡಳಿತ: ಸೇನಿ : 243 :2016-17 ದಿನಾಂಕ: 01-02-2017

## ಸುತ್ತೋಲೆ ಸಂಖ್ಯೆ : 1610

ವಿಷಯ: ಕ.ರಾ.ರ.ಸಾ ನಿಗಮದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಭಾಗಗಳು/ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಜಾಗೃತ ಕೋಶಗಳನ್ನು ಸೃಜಿಸುವ, ಜಾಗೃತಾಧಿಕಾರಿಗಳನ್ನು ನೇಮಿಸುವ ಹಾಗೂ ಕರ್ತವ್ಯಗಳನ್ನು ನಿರ್ದಿಷ್ಟಪಡಿಸುವ ಕುರಿತು.

ಉಲ್ಲೇಖ: 1 ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 88 ಸೇಲೋಯು 2016 (ಭಾಗ-1), ದಿನಾಂಕ: 06-07-2016
2 ಸರ್ಕಾರದ ಆದೇಶ ಸಂಖ್ಯೆ: ಸಾರಿಇ 52 ಸಂಇಸೇ 2016, ಬೆಂಗಳೂರು ದಿನಾಂಕ: 12-07-2016

---

ಕರ್ನಾಟಕ ಸರ್ಕಾರದ ಸಚಿವಾಲಯದ ಇಲಾಖೆಗಳ ಆಡಳಿತ ನಿಯಂತ್ರಣಕ್ಕೊಳಪಡುವ ಹಾಗೂ ಎಲ್ಲಾ ಕ್ಷೇತ್ರ/ಇಲಾಖೆಗಳು/ಶಾಸನಬದ್ಧ ಸಂಸ್ಥೆಗಳು/ವಿಭಾಗ/ಜಿಲ್ಲಾ ಕಛೇರಿಗಳಲ್ಲಿ ಒಂದು ಜಾಗೃತ ಕೋಶ ಇರತಕ್ಕದ್ದು ಹಾಗೂ ಸದರಿ ವಿಭಾಗ/ಜಿಲ್ಲಾ ಮಟ್ಟದ ಕಛೇರಿಯ ಮುಖ್ಯಸ್ಥರ ನಂತರದ ಅಧಿಕಾರಿಯನ್ನು ಜಾಗೃತ ಅಧಿಕಾರಿಯನ್ನಾಗಿ ನೇಮಿಸುವಂತೆ ಉಲ್ಲೇಖ-1ರ ಸರ್ಕಾರಿ ಆದೇಶದಲ್ಲಿ ತಿಳಿಸಲಾಗಿರುತ್ತದೆ.

ಅದರಂತೆ, ಸಾರಿಗೆ ಇಲಾಖೆಯು ಉಲ್ಲೇಖ-2 ರಲ್ಲಿ ನಿರ್ದೇಶಕರು (ಭ & ಜಾ) ರವರನ್ನು ಕ.ರಾ.ರ.ಸಾ ನಿಗಮದ "ಮುಖ್ಯ ಜಾಗೃತ ಅಧಿಕಾರಿ" ಯವರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿರುತ್ತದೆ.

ತತ್ಸಂಬಂಧ, ಕ.ರಾ.ರ.ಸಾ ನಿಗಮದ ವ್ಯಾಪ್ತಿಯ ಎಲ್ಲಾ ವಿಭಾಗಗಳು/ಪ್ರಾದೇಶಿಕ ಕಾರ್ಯಾಗಾರಗಳ ಮಟ್ಟದಲ್ಲಿಯೂ ಜಾಗೃತ ಕೋಶಗಳನ್ನು ಸೃಜಿಸಬೇಕಾಗಿರುವುದರಿಂದ ಈ ಮೂಲಕ ಸದರಿ ವಿಭಾಗಗಳು/ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಜಾಗೃತ ಕೋಶವನ್ನು ಸೃಜಿಸಲಾಗಿದೆ ಹಾಗೂ ಸದರಿ ವಿಭಾಗಗಳು/ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪ ಮುಖ್ಯ ಭದ್ರತಾ ಮತ್ತು ಜಾಗೃತಾಧಿಕಾರಿ/ಭದ್ರತಾ ಮತ್ತು ಜಾಗೃತಾಧಿಕಾರಿ/ಪ್ರಭಾರ ಭದ್ರತಾ ಮತ್ತು ಜಾಗೃತಾಧಿಕಾರಿಗಳನ್ನು. ಸದರಿ ವಿಭಾಗಗಳು/ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಜಾಗೃತ ಅಧಿಕಾರಿಗಳನ್ನಾಗಿ ಈ ಮೂಲಕ ನೇಮಿಸಲಾಗಿದೆ. ವಿಭಾಗಮಟ್ಟದ ಸಂಬಂಧಪಟ್ಟ ಅಧಿಕಾರಿಗಳು ವಿಚಾರಣೆಗೆ ಅವಶ್ಯ ಮಾಹಿತಿಗಳನ್ನು ಕಾಲವಿಳಂಭವಿಲ್ಲದೆ ಒದಗಿಸುವುದು.

ಜಾಗೃತ ಅಧಿಕಾರಿಗಳು ಉಲ್ಲೇಖ-1 ರ ಸರ್ಕಾರದ ಆದೇಶದಂತೆ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. (ಸರ್ಕಾರದ ಆದೇಶ ಪತ್ರದ ಪ್ರತಿಯನ್ನು ಲಗತ್ತಿಸಿದೆ)

ಈ ಸುತ್ತೋಲೆಯು ತಕ್ಷಣದಿಂದ ಜಾರಿಗೆ ಬರುತ್ತದೆ.

(ರಾಜೇಂದರ್ ಕುಮಾರ್ ಕಟಾರಿಯಾ)
ವ್ಯವಸ್ಥಾಪಕ ನಿರ್ದೇಶಕರು

ಅಡಕ:ಮೇಲಿನಂತೆ